Golden Research Thoughts
ISSN 2231-5063
Impact Factor : 2.2052 (UIF)
Volume-4 | Issue-3 | Sept-2014 Available online at www.aygrt.isrj.net

# ಬುಡಕಟ್ಟು ಜನರ ರಾಜಕೀಯ ಭಾಗವಹಿಸುವಿಕೆ (ಮೈಸೂರು ಮತ್ತು ಕೊಡಗು ಜಿಲ್ಲೆ)

ಲೇಖಕರು : ರಾಧಾಮಣಿ ಟಿ ಆರ್, ಸಂಶೋಧನಾ ವಿದ್ಯಾರ್ಥಿನಿ, ಬುಡಕಟ್ಟು ಅಧ್ಯಯನ ವಿಭಾಗ, ಗಿರಿಸೀಮೆ, ಕನ್ನಡ ವಿಶ್ವ ವಿದ್ಯಾಲಯ, ವಿದ್ಯಾರಣ್ಯ, ಹಂಪಿ.

**ಪೀಠಿಕೆ :** ಬುಡಕಟ್ಟುಗಳ ತವರುಮನೆ ಎಂದೇ ಖ್ಯಾತವಾಗಿರುವ ಜಿಲ್ಲೆಗಳೆಂದರೆ ಮೈಸೂರು ಮತ್ತು ಕೊಡಗು ಜಿಲ್ಲೆಗಳು. ಈ ಎರಡೂ ಜಿಲ್ಲೆಗಳಲ್ಲಿರುವ ಅರಣ್ಯ ಪ್ರದೇಶವು ಭೌಗೋಳಿಕವಾಗಿ ಬುಡಕಟ್ಟು ಜನರ ಜೀವನ ಶೈಲಿಗೆ ಹೇಳಿಮಾಡಿಸಿದಂತಿದೆ. ಈ ಎರಡೂ ಜಿಲ್ಲೆಗಳಲ್ಲಿ ಡುಂಗ್ರಿಗರಾಸಿಯಾ, ಹಕ್ಕಿಪಿಕ್ಕಿ, ಜೇನುಕುರುಬ, ಕಾಡು(ಬೆಟ್ಟ)ಕುರುಬ, ಕುರುಬ, ಯರವ, ಸೋಲಿಗ, ಮೇದ, ನಾಯಕ ಸಮುದಾಯದವರು ನೆಲಿಸಿದ್ದು ಇವರ ಆರ್ಥಿಕ, ಸಾಮಾಜಿಕ ಜೀವನವು ಅತ್ಯಂತ ದುಸ್ಥರವಾದುದು. ಅದರಲ್ಲಿ ಅವರ ರಾಜಕೀಯ ಭಾಗವಹಿಸುವಿಕೆಯು ಅತೀ ಕಡಿಮೆ. ರಾಜಕೀಯವಾಗಿ ಅಂತಹ ಸಣ್ಣ ಮಟ್ಟ ಅಧಿಕಾರ ಹೊಂದಿರುವ ವಿವರ ಹಾಗೂ ಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಯು ಈ ಲೇಖನದಲ್ಲಿ ತಿಳಿಸಿದೆ.

ಭಾರತದಲ್ಲಿ ಇಂದು ಬುಡಕಟ್ಟುಗಳು ಅತ್ಯಂತ ತುರ್ತು ಅಧ್ಯಯನದ ಕೇಂದ್ರ ಬಿಂದುಗಳಾಗಿವೆ. ಏಕೆಂದರೆ ನಗರಗಳು ಮತ್ತು ಗ್ರಾಮಗಳು ಅಭಿವೃದ್ದಿಯ ನಾಗಾಲೋಟ ಅನುಸರಿಸಿದರೂ ಕೂಡ ಈ ಬುಡಕಟ್ಟು ಜನರು ತಮ್ಮ ಮೂಲ ನೆಲೆಯಲ್ಲಿಯೇ ವಾಸಿಸುತ್ತಾ ಸಾಂಪ್ರದಾಯಿಕ ಜೀವನ ವಿಧಾನವನ್ನು ಅನುಸರಿಸುತ್ತಾ ಕಠಿಣ ಜೀವನವನ್ನು ನಡೆಸುತ್ತಾ ಬಂದಿವೆ. ಅಂತಹ ಕುಟುಂಬಗಳು ಇಂದು ಅಧ್ಯಾಯನಕ್ಕೆ ಒಳಪಡಿಸಲು ಯೋಗ್ಯವಾಗಿವೆ. ಗ್ರಾಮ, ನಗರಗಳ ಜನರು ರಾಜಕೀಯವಾಗಿ ಭಾಗವಹಿಸಿದ್ದರೆ, ಅವರಿಗೆ ಸ್ಥಾನಮಾನ ಸಿಕ್ಕರೆ ೫ – ೬ ತಲೆಮಾರಿಗೆ ಆಗುವಷ್ಟು ಹಣವನ್ನು, ಸಂಪತ್ತನ್ನು ಶೇಖರಿಸುವ ಸ್ವಾರ್ಥ ರಾಜಕಾರಣಿಗಳ ಮಧ್ಯೆ ರಾಜಕೀಯವಾಗಿ ಸ್ಥಾನ ಮೀಸಲಾತಿ ಆಧಾರದಲ್ಲಿ ಕಲ್ಪಿತವಾಗಿದ್ದರೂ, ಮೂಲಭೂತ ಸೌಕರ್ಯಗಳನ್ನು ಪಡೆಯುವಲ್ಲಿಯೂ ಸಹ ಇಂದು ಬುಡಕಟ್ಟು ಸಮುದಾಯಗಳು ಹೆಣಗುವ ಪರಿಸ್ಥಿತಿ ಇದೆ.

ಮೈಸೂರು ಮತ್ತು ಕೊಡಗು ಜಿಲ್ಲೆಯಲ್ಲಿ ಡುಂಗ್ರಿಗರಾಸಿಯಾ, ಜೇನುಕುರುಬ, ಕಾಡುಕುರುಬ, ಹಕ್ಕಿಪಿಕ್ಕಿ, ಮರಾಟ, ಮೇದ, ಯರವಾ, ಸೋಲಿಗ, ಕುರುಬ, ಬುಡಕಟ್ಟು ಜನರು ವಾಸವಾಗಿದ್ದಾರೆ. ಇದರಲ್ಲಿ ಜೇನುಕುರುಬ ಬುಡಕಟ್ಟು ಅತ್ಯಂತ ಹಿಂದುಳಿದ ಬುಡಕಟ್ಟು ಸಮುದಾಯವಾಗಿದೆ. ಈ ಬುಡಕಟ್ಟುಗಳು ರಾಜಕೀಯವಾಗಿ ಹೊಂದಿರುವ ಸ್ಥಾನಮಾನವನ್ನು ಈ ಲೇಖನದಮೂಲಕ ತಿಳಿದುಕೊಳ್ಳೋಣ.

## ಅಧ್ಯಯನದ ಉದ್ದೇಶ :

* ಮೈಸೂರು ಮತ್ತು ಕೊಡಗು ಜಿಲ್ಲೆಯ ಬುಡಕಟ್ಟುಗಳ ಸೂಕ್ಷ್ಮ ಪರಿಚಯ ಮಾಡಿಕೊಳ್ಳುವುದು.
* ರಾಜಕೀಯವಾಗಿ ಮೀಸಲಾತಿ ಆಧಾರದಲ್ಲಿ ಅಧಿಕಾರ ಹೊಂದಿರುವ ಕಾರ್ಯ, ಸಮುದಾಯಕ್ಕೆ ರಾಜಕೀಯ ಕೊಡುಗೆ ಏನೆಂದು ತಿಳಿಯುವುದು.

## ಅಧ್ಯಯನದ ವಿಧಾನ :

ಈ ಸಂಶೋಧನಾ ಲೇಖನವನ್ನು ಸಿದ್ದಪಡಿಸಲು ಸಂದರ್ಶನ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಸಮುದಾಯದ ಮೂಲ ಮಾಹಿತಿಯನ್ನು ಮಾಧ್ಯಮಿಕ ಮೂಲದಿಂದ ಸಂಗ್ರಹಿಸಲಾಗಿದೆ.

## ಮೈಸೂರು ಮತ್ತು ಕೊಡಗು ಜಿಲ್ಲೆಯ ಬುಡಕಟ್ಟುಗಳು.

ಮೈಸೂರು ಮತ್ತು ಕೊಡಗು ಜಿಲ್ಲೆಗಳನ್ನು ಬುಡಕಟ್ಟುಗಳ ತವರುಮನೆ ಎಂದೇ ಕರೆಯಬಹುದು. ಏಕೆಂದರೆ ಕರ್ನಾಟಕದ ಅತೀ ಹೆಚ್ಚು ಬುಡಕಟ್ಟು ಜನರನ್ನು ಈ ಎರಡೂ ಜಿಲ್ಲೆಗಳು ತಮ್ಮ ಮಡಿಲಲ್ಲೇ ಹೊಂದಿವೆ. ಇಲ್ಲಿನ ನೈಸರ್ಗಿಕ ಸಂಪತ್ತು, ಹವಾಗುಣ, ನೀರಿನ ಸೌಕರ್ಯ ಹಾಗೂ ಕಾಡು ಮುಂತಾದವು ಬುಡಕಟ್ಟುಗಳು ಇಲ್ಲಿ ನೆಲೆ ನಿಲ್ಲುವಂತೆ ಮಾಡಿವೆ.

Golden Research Thoughts
ISSN 2231-5063
Impact Factor : 2.2052 (UIF)
Volume-4 | Issue-3 | Sept-2014 Available online at www.aygrt.isrj.net

ಮುಖ್ಯವಾಗಿ ಮೈಸೂರು ಜಿಲ್ಲೆಯಲ್ಲಿ ಡುಂಗ್ರಿಗರಾಸಿಯ, ಜೇನುಕುರುಬ, ಬೆಟ್ಟಕುರುಬ, ಹಕ್ಕಿಪಿಕ್ಕಿ, ಯರವ, ಸೋಲಿಗ ಬುಡಕಟ್ಟುಗಳಿವೆ. ಕೊಡಗು ಜಿಲ್ಲೆಯಲ್ಲಿ ಜೇನುಕುರುಬ, ಬೆಟ್ಟಕುರುಬ, ಕುರುಬ,(ಹಾಲುಮತ) ಯರವ, ಪಣೆಯರವ, ಪಂಜರಿ ಯರವ, ಮೇದ ಬುಡಕಟ್ಟಿನ ಜನರು ವಾಸವಾಗಿದ್ದಾರೆ.

**ಡುಂಗ್ರಿಗರಾಸಿಯಾ ಬುಡಕಟ್ಟು :**

ಈ ಬುಡಕಟ್ಟು ಸಮುದಾಯವು ಭಾರತದ ಮೂಲನಿವಾಸಿಗಳಲ್ಲೊಂದು. ದಕ್ಷಿಣಭಾರತದ ಕೇರಳ ಹಾಗು ತಮಿಳುನಾಡು ರಾಜ್ಯಗಳನ್ನು ಹೊರತು ಪಡಿಸಿದರೆ ಭಾರತದ ಬಹುತೇಕ ರಾಜ್ಯಗಳಲ್ಲಿ ಈ ಸಮುದಾಯವು ನೆಲೆ ನಿಂತಿರುವುದನ್ನು ಕಾಣಬಹುದು.
ಗುಜರಾತ್ ಮೂಲದ ಡುಂಗ್ರಿಗರಾಸಿಯಾ ಬುಡಕಟ್ಟು ಭಾರತದಲ್ಲಿ ಬೇರೆ ಬೇರೆ ಪ್ರಾಂತ್ಯಗಳಿಗೆ ವಲಸೆ ಹೋಗಿರುವರು. ಅವರ ಅನಕ್ಷರತೆ ಅಜಾಗುರತೆಯಿಂದಾಗಿ ಕಸುಬಿನ ಹಿನ್ನಲೆಯಲ್ಲಿ ಸ್ಥಳೀಯರು ಇವರನ್ನು ಹಲವೆಡೆ ಗೋಸಂಗಿ, ಹಕ್ಕಿಪಿಕ್ಕಿ, ಶಿಳ್ಳೇಕ್ಯಾತ, ಕಿಳ್ಳೇಕ್ಯಾತ ಮುಂತಾದ ಹೆಸರುಗಳಿಂದ ಕರೆದಿರುವುದುಂಟು. ಹೀಗಾಗಿ ಇವರಿಗೆ ಸಂವಿಧಾನ ಬದ್ದವಾಗಿ ಸ್ವೀಕರಿಸಬೇಕಾದ ಸೌಲಭ್ಯ ಸಿಗದೇಹೋಗಿವೆ.

**ಸಮಸ್ಯೆಗಳು :-**

* ಡುಂಗ್ರಿಗರಾಸಿಯಾ ಸಮುದಾಯದ ಜನರು ಮೈಸೂರು ನಗರದ ಮಹದೇಶ್ವರ ಬಡಾವಣೆಯಲ್ಲಿ ೧೮ ಕುಟುಂಗಳು ಸುಮಾರು ೨೦ವರ್ಷಗಳಿಂದ ವಾಸವಾಗಿದ್ದು ಇವರಿಗೆ ಆ ಸ್ಥಳದ ಹಕ್ಕು ಪತ್ರಗಳು ಇದುವರೆವಿಗೂ ಸಿಕ್ಕಿಲ್ಲ.
* ಪಿರಿಯಾಪಟ್ಟಣ ತಲ್ಲೋಕಿನಲ್ಲಿ ೫೭ ಕುಟುಂಬಗಳು ವಾಸವಾಗಿವೆ. ಬಡತನದ ಕಾರಣದಿಂದ ವಿದ್ಯಾವಂತರ ಸಂಖ್ಯೆ ಕಡಿಮೆ ಇದೆ. ಚಿಕ್ಕ ವಯಸ್ಸಿಗೆ ಮಕ್ಕಳು ದುಡಿಯಬೇಕಾದ ಅವಶ್ಯಕತೆಯಿದೆ.
* ನೆಲ್ಲೂರುಪಾಲ, ಹುಣಸೂರು ತಾಲ್ಲೋಕು ಮೈಸೂರು ಜಿಲ್ಲೆಯಲ್ಲಿ ૩೭ ಕುಟುಂಬಗಳಿದ್ದು, ಇವರ ಬಡತನದ ಸಮಸ್ಯೆಯಿಂದಾಗಿ ಋತುಮಾನಕ್ಕೆ ಅನುಗುಣವಾಗಿ ದುಡಿಯಲು ವಲಸೆ ಹೋಗುತ್ತಾರೆ.

ಈ ಡುಂಗ್ರಿ ಗರಾಸಿಯಾ ಸಮುದಾಯದಲ್ಲಿ ಇಲ್ಲಿಯವರೆಗೆ ಈ ಮೈಸೂರು ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೋಕು ಪಂಚಾಯಿತಿ, ಜಿಲ್ಲಾಪಂಚಾಯಿತಿಗಾಗಲಿ ಆಯ್ಕೆ ಯಾಗಿರುವ ಒಂದು ಉದಹರಣೆಯೂ ಇಲ್ಲವಾಗಿದೆ.

**ಜೇನು ಕುರುಬ ಬುಡಕಟ್ಟು :**

ಭಾರತ ಸರ್ಕಾರ ೧೯೫೦ರ ಸೆಪ್ಟೆಂಬರ್ ೬ ರಂದು ಮೈಸೂರು ರಾಜ್ಯದ ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ ೬ ಬುಡಕಟ್ಟುಗಳನ್ನು ಸೇರಿಸಿತು. ಅವುಗಳಲ್ಲಿ ಜೇನುಕುರುಬ ಬುಡಕಟ್ಟು ಕ್ರಮಸಂಖ್ಯೆ ૩ರಲ್ಲಿ ದಾಖಲಾಗಿದೆ.
The scheduled cast and scheduled tribes lists modificastion order 1956 scheduled iii part viii mysore. (1)5 and 6 ರ ಪ್ರಕಾರ ಜೇನುಕುರುಬ ಸಮುದಾಯಗಳನ್ನು ಹಳೇಮೈಸೂರು ರಾಜ್ಯಕ್ಕೆ ಸೀಮಿತಗೊಳಿಸಿ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವುದನ್ನು ೧೯೭೭ರಲ್ಲಿ ಇವರ ಈ ಪ್ರಾದೇಶಿಕ ಮಿತಿಯನ್ನು ಸಡಿಲಿಸಿ ಕರ್ನಾಟಕದಾದ್ಯಂತ ವಿಸ್ತರಿಸಿದರು. ಜೇನುಕುರುಬ ಸಮುದಾಯವು ಕರ್ನಾಟಕದ ಆದಿಮ ಬುಡಕಟ್ಟುಗಳಲ್ಲಿ ಒಂದು. (ಮತ್ತೊಂದು ಕೊರಗ ದಕ್ಷಿಣ ಕನ್ನಡ ಜಿಲ್ಲೆ) ಜೇನುಕುರುಬ ಬುಡಕಟ್ಟು ಅತ್ಯಂತ ಹಿಂದುಳಿದ ಸಮುದಾಯ ವಾಗಿದ್ದು ಇಂದಿಗೂ ದಟ್ಟವಾದ ಕಾಡಿನ ನಡುವೆ ಗುಡಿಸಲು ಕಟ್ಟಿಕೊಂಡು ಜೀವಿಸುತ್ತಿದೆ.

**ರಾಜಕೀಯದಲ್ಲಿ ಭಾಗವಹಿಸುವಿಕೆ :**

೧. ಶ್ರೀಮತಿ ಜಾಜಿ, ತಾಲ್ಲೋಕು ಪಂಚಾಯಿತಿಯಲ್ಲಿ ಸದಸ್ಯರು, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.
೨. ಶ್ರೀಮತಿ ಸೋಮಕ್ಕ, ಗ್ರಾಮಪಂಚಾಯಿತಿ ಸದಸ್ಯರು, ದೊಡ್ಡಮಳ್ತೆ ಗ್ರಾಮ ಪಂಚಾಯಿತಿ, ಸೋಮವಾರಪೇಟೆ ತಾಲ್ಲೂಕು,
૩. ಶ್ರೀ ರಾಮಕೃಷ್ಣ, ನಾಣಚ್ಚಿ ಗದ್ದೆ ಹಾಡಿ, ನಾಲ್ಕೇರಿ ಗ್ರಾಮ ಪಂಚಾಯಿತಿ ಸದಸ್ಯರು, ವೀರರಾಜಪೇಟೆ ತಾಲ್ಲೂಕು,
೪. ಶ್ರೀಮತಿ ಗೌರಮ್ಮ, ಮಜ್ಜಿಗೆಹಳ್ಳ, ತಿತಿಮತಿ ಗ್ರಾಮ ಪಂಚಾಯಿತಿ ಸದಸ್ಯರು, ವೀರರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

Golden Research Thoughts
ISSN 2231-5063
Impact Factor : 2.2052 (UIF)
Volume-4 | Issue-3 | Sept-2014 Available online at www.aygrt.isrj.net

**ಸಮಸ್ಯೆಗಳು :**

ರಾಜಕೀಯದಲ್ಲಿ ಉತ್ತಮವಾದ ಅಧಿಕಾರದ ಸ್ಥಾನಮಾನವಿಲ್ಲದೇ ಇರುವುದರಿಂದ ಇವರ ಮೂಲಭೂತ ಅವಶ್ಯಕತೆಗಳನ್ನು ಮೀರಿ ಜೀವನ ಮಟ್ಟ ಸುಧಾರಿಸಲು ಇವರಿಗೆ ಸಾಧ್ಯವಾಗಲಿಲ್ಲ. ಅತ್ಯಂತ ನಾಚಿಕೆಯ ಸ್ವಭಾವವನ್ನು ಹೊಂದಿರುವ ಜೇನುಕುರುಬರು ತಮ್ಮ ಮೂಲಭೂತ ಅಗತ್ಯಗಳನ್ನು ಅಧಿಕಾರಿಗಳ ಮುಂದೆ ಕೇಳುವಷ್ಟು ಜ್ಞಾನವಂತರಿಲ್ಲ.

**ಕಾಡುಕುರುಬ ಬುಡಕಟ್ಟು :**

೧೯೩೧ರ ಜನಗಣತಿಯಲ್ಲಿಯೇ ಇವರನ್ನು ಪ್ರತ್ಯೇಕವಾಗಿ ಗುರುತಿಸಿ ಗಣಿಸಲಾಗಿದೆ. ಇಡೀ ಮೈಸೂರು ರಾಜ್ಯದಲ್ಲಿ ೧೯೩೬ ಪರಿಶಿಷ್ಟ ಪಂಗಡ ಪಟ್ಟಿಯ ಭಾರತ ಸರ್ಕಾರದ ಪ್ರಾಂತೀಯ ಶಾಸನಾಧಿಕಾರದ ಸಭೆಗಳು ಆದೇಶ ೧೩೬ ರ ೧೩ನೇ ತಪಸೀಲು ಇದರಲ್ಲಿ ಕಾಡು(ಬೆಟ್ಟ) ಕುರುಬ ಸಮುದಾಯವು ಬುಡಕಟ್ಟುಗಳ ಸ್ಥಾನಮಾನವನ್ನು ಪಡೆದಿದೆ.

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೋಕು, ಹಣಸೂರು, ಪಿರಿಯಪಟ್ಟಣ ತಾಲ್ಲೋಕಿನ ಕಾಡಿನಲ್ಲಿ ಮತ್ತು ಕಾಡಂಚಿನ ಪ್ರದೇಶದಲ್ಲಿ ವಾಸವಾಗಿದ್ದಾರೆ. ಕೊಡಗು ಜಿಲ್ಲೆಯ ವಿರಾಜಪೇಟೆ, ಸೋಮವಾರಪೇಟೆ ಮತ್ತು ಮಡಿಕೇರಿಯ ಕಾಡಿನಲ್ಲಿ ಕಂಡುಬರುತ್ತಾರೆ.

**ಸಮಸ್ಯೆಗಳು :**

ಜಾತೀ ಪ್ರಮಾಣ ಪತ್ರಗಳ ಸಮಸ್ಯೆ

ಕೆಲವು ಕಡೆ ಬೆಟ್ಟಕುರುಬ ಎಂದೂ, ಇನ್ನೂ ಕೆಲವು ಕಡೆ ಕಾಡುಕುರುಬ ಎಂದು ನಮೂದಾಗಿದೆ. ಬೆಟ್ಟಕುರುಬ ಎಂಬ ಜಾತೀ ಪತ್ರ ಹೊಂದಿದವರಿಗೆ ಯಾವುದೇ ಮೀಸಲಾತಿ ಸೌಲಭ್ಯ ಸಿಗುತ್ತಿಲ್ಲ. ಇದರಿಂದ ಸರ್ಕಾರದ ಸಣ್ಣ– ಸಣ್ಣ ಉದ್ಯೋಗವಕಾಶ ಕೈ ತಪ್ಪಿವೆ.

ಬಡತನ, ಅನಕ್ಷರತೆ ಹೆಚ್ಚಾಗಿದೆ.

ಬೆಟ್ಟಕುರುಬ ಸಮುದಾಯದಲ್ಲಿ ಕಿತ್ತು ತಿನ್ನುವ ಬಡತನವಿದ್ದು, ಅನಕ್ಷರತೆಯ ಪ್ರಮಾಣವೂ ಅಧಿಕವಾಗಿದೆ.

ಪುನರ್ವಸತೀಕರಣದ ಸಮಸ್ಯೆ

ಮೂಲ ಸ್ಥಳದಿಂದ ಅರಣ್ಯ ಇಲಾಖೆ ಇವರನ್ನು ಕಾಡಂಚಿಗೆ ಅಟ್ಟಿರುವುದು. ಇದರಿಂದ ಇವರಿಗೆ ಸ್ಥಳದ ಮರು ಹೊಂದಾಣಿಕೆಯ ಸಮಸ್ಯೆ ಉಂಟಾಗಿದೆ.

**ಹಕ್ಕಿ ಪಿಕ್ಕಿ ಬುಡಕಟ್ಟು :**

೧೯೫೬ ರ ಭಾಷಾವಾರು ಪ್ರಾಂತ್ಯ ರಚನೆಯ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೈಸೂರು ರಾಜ್ಯ ಘೋಷಿತ ಪರಿಷ್ಕೃತ ಪಟ್ಟಿಯಲ್ಲಿ SC / ST modification order 1956. Scheduled iii part vii Mysore (1) 2 ಹಕ್ಕಿ ಪಿಕ್ಕಿ ಬುಡಕಟ್ಟನ್ನು ಹಳೇ ಮೈಸೂರು ರಾಜ್ಯದ ಜಿಲ್ಲೆಗಳಲ್ಲಿ ಮಾತ್ರ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಪ್ರಥಮವಾಗಿ ಸೇರಿಸಲಾಯಿತು. ಹಕ್ಕಿ ಪಿಕ್ಕಿ ಎಂಬ ಹೆಸರು ಇವರ ಸಾಂಪ್ರದಾಯಕ ಕಸುಬು ಹಕ್ಕಿಗಳನ್ನು ಹಿಡಿಯುವುದರಿಂದ ಬಂದಿರುವುದು. ಹಕ್ಕಿ ಪಿಕ್ಕಿ ಕನ್ನಡದ ಜೋಡು ನುಡಿ. ಹಕ್ಕಿ ಎಂದರೆ ಹಕ್ಷಿ ಎಂದರ್ಥ. ಪಿಕ್ಕಿ ಎಂದರೆ ಅದರ ಪ್ರತಿಧ್ವನಿ. ಭಾರತದ ಹರಿಜನ ಗಿರಿಜನ ಅಭಿವೃದ್ಧಿ ಯೋಜನೆ ಅನ್ವಯ ೧೯೫೮ ರಲ್ಲಿ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಪಕ್ಷಿರಾಜಪುರದಲ್ಲಿ ಇವರನ್ನು ನೆಲೆ ನಿಲ್ಲಿಸಲಾಯಿತು.

೨೦೧೧ ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿನ ಇವರ ಜನಸಂಖ್ಯೆ ೧೧,೯೨ ಎಂದು ನಮೂದಾಗಿದೆ. ಇವರ ಮಾತೃ ಭಾಷೆ ವಾಘ್ರಿ. ಇದರೊಂದಿಗೆ ಕನ್ನಡ, ತೆಲುಗು, ತಮಿಳು, ಮಳಯಾಳಂ, ಇಂಗ್ಲೀಷ್ ಮತ್ತು ಹಿಂದಿ ಭಾಷೆಯನ್ನು ಬಳಸುವರು.

**ಕುರುಬ ಬುಡಕಟ್ಟು :**

ಕರ್ನಾಟಕದಲ್ಲಿ ಕುರುಬರು ಬಹುಸಂಖ್ಯಾತರಿದ್ದರೂ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಅಧಿಸೂಚಿತ ಕುರುಬ ಬುಡಕಟ್ಟು ಮಾತ್ರ ಒಂದು ಅಲ್ಪಸಂಖ್ಯಾತ ಬುಡಕಟ್ಟಾಗಿರುವುದು. ಭಾರತ ಸರ್ಕಾರದ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ ಆದೇಶ ಸಂಖ್ಯೆ ೨೪೪೬೬ ಎ ನವದೆಹಲಿ. ದಿನಾಂಕ ೧೯–೧೦–೧೯೫೬ರ ಪ್ರಕಾರ ಕೊಡಗು ಜಿಲ್ಲೆಗೆ ಸೀಮಿತ ಗೊಂಡಂತೆ ಕುರುಬ ಬುಡಕಟ್ಟು ಪರಿಶಿಷ್ಟ ಪಂಗಡದ ಪಟ್ಟಿಯ ಕ್ರಮಸಂಖ್ಯೆ ೩ ರಲ್ಲಿರುವುದು. ೨೦೧೧ರ ಜನಗಣತಿಯ ಪ್ರಕಾರ ಕೊಡಗು ಜಿಲ್ಲೆಯ ಕುರುಬ ಬುಡಕಟ್ಟಿನ ಜನಸಂಖ್ಯೆ ೩೧೧೧ ಮಾತ್ರ.

Golden Research Thoughts
ISSN 2231-5063
Impact Factor : 2.2052 (UIF)
Volume-4 | Issue-3 | Sept-2014 Available online at www.aygrt.isrj.net

**ರಾಜಕೀಯ ಭಾಗವಹಿಸುವಿಕೆ :**

ಶ್ರೀ ಕೆ.ಬಿ.ಶಾಂತಪ್ಪ, ಜಿಲ್ಲಾ ಪಂಚಾಯತ್ ಸದಸ್ಯರು, ಕೊಡಗು.
ಶ್ರೀ ಹೆಚ್.ಟಿ. ಸುಂದರ, ಜಿಲ್ಲಾ ಪಂಚಾಯತ್ ಸದಸ್ಯರು, ಕೊಡಗು.
ಶ್ರೀ ಗಂಗಾಧರ, ಉಪಾಧ್ಯಕ್ಷರು, ಲ್ಯಾಂಪ್ಸ್ ಬುಡಕಟ್ಟು ಸಹಕಾರ ಸಂಘ, ಬಸವನಹಳ್ಳಿ, ಕೊಡಗು.
ಶ್ರೀ ಉದಯಕುಮಾರ್ ಚಿಕ್ಕಳವಾರ, ಲ್ಯಾಂಪ್ಸ್ ಬುಡಕಟ್ಟು ಸಹಕಾರ ಸಂಘದ ಮಾಜಿ ಅಧ್ಯಕ್ಷರು ಬಸವನಹಳ್ಳಿ, ಕೊಡಗು.
ಶ್ರೀ ಕೆ.ಬಿ. ಚಂದ್ರ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರು, ರಂಗಸಮುದ್ರ, ಕೊಡಗು.

**ಮರಾಠ ಬುಡಕಟ್ಟು :**

ಮರಾಠ ಬುಡಕಟ್ಟು ಮರಾಟಿ ಬುಡಕಟ್ಟೆಂದು ಗುರುತಿಸಲ್ಪಡುವುದು. ಇದು ಕರ್ನಾಟಕ, ಕೇರಳ ರಾಜ್ಯದ ಹಲವು ಜಿಲ್ಲೆಗಳಿಗೆ ಸೀಮಿತ ಗೊಂಡತೆ ಪರಿಶಿಷ್ಟಪಂಗಡದ ಪಟ್ಟಿಯಲ್ಲಿರುವುದು. ೨೦೧೧ರ ಜನಗಣತಿಯ ಪ್ರಕಾರ ಕೊಡಗು ಜಿಲ್ಲೆಯಲ್ಲಿನ ಮರಾಠ ಬುಡಕಟ್ಟಿನ ಜನಸಂಖ್ಯೆ ೩೪೬.

**ರಾಜಕೀಯ ಭಾಗವಹಿಸುವಿಕೆ :**

ಶ್ರೀ ಎಸ್.ಎನ್. ರಾಜಾರಾವ್, ಜಿಲ್ಲಾಪಂಚಾಯಿತಿ ಅಧ್ಯಕ್ಷರು. ಕೊಡಗು.
ಶ್ರೀಮತಿ ಶಕುಂತಳ, ಬಾಳೆಲೆ ಕ್ಷೇತ್ರ. ಜಿಲ್ಲಾಪಂಚಾಯಿತಿ ಸದಸ್ಯರು.

**ಸೋಲಿಗರು :**

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ, ಹುಣಸೂರು ತಾ: ಗಳಲ್ಲಿ, ಚಾಮರಾಜನಗರದ ಕೊಳ್ಳೇಗಾಲ, ಯಳಂದೂರು ಹಾಗೂ ಬಿಳಿಗಿರಿರಂಗನಬೆಟ್ಟದಲ್ಲಿ ವಾಸಿಸುತ್ತಾರೆ. ೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕದ ಇವರ ಜನಸಂಖ್ಯೆ ೩೩೮೯.

**ಯರವರು :**

ಕೊಡವ ಭಾಷೆಯಲ್ಲಿ ಎರ ಎಂದರೆ ಬೇಕು ಎಂದರ್ಥ. ಎರವ ಎಂದರೆ ಬೇಡುವವನು ಎಂದರ್ಥ ಬರುತ್ತದೆ. ೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕದ ಇವರ ಜನಸಂಖ್ಯೆಯು ೩೦೩೪೯, ಕೊಡಗು ಜಿಲ್ಲೆಯ ದಕ್ಷಿಣ ಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಯರವರಲ್ಲಿ ಪಣಿಯರವ, ಪಂಜರಿಯರವ ಎಂಬ ಎರಡು ಮುಖ್ಯವಾದ ಪಂಗಡಗಳಿವೆ. ಕೊಡಗುಜಿಲ್ಲೆಗೆ ಸೀಮಿತ ಗೊಂಡಂತೆ ಯರವ ಬುಡಕಟ್ಟು ಪರಿಶಿಷ್ಟ ಪಂಗಡದ ಪಟ್ಟಿಯ ಕ್ರಮಸಂಖ್ಯೆ ೬ ರಲ್ಲಿದೆ. ೧೯೭೬ ರ ಆದೇಶದ ಪ್ರಕಾರ ಯರವ ಬುಡಕಟ್ಟಿನ ಪಾದೇಶಿಕ ಮಿತಿಯನ್ನು ಕರ್ನಾಟಕದಾದ್ಯಂತ ವಿಸ್ತರಿಸಲಾಯಿತು.

**ರಾಜಕೀಯ ಭಾಗವಹಿಸುವಿಕೆ:**

ಶ್ರೀ ಬಿ.ಕಾವೇರ ಉದ್ದೂರು ಗ್ರಾಮಪಂಚಾಯಿತಿಯ ಅಧ್ಯಕ್ಷರು. ಹೆಚ್.ಡಿ.ಕೋಟೆ ತಾ: ಮೈಸೂರು ಜಿಲ್ಲೆ.
ಶ್ರೀಮತಿ ಲಕ್ಷ್ಮಿ ಕೋಂ ದೇವರಾಜ್ ಅಂಕನಾಥಪುರ ಗ್ರಾಮಪಂಚಾಯಿತಿಯ ಸದಸ್ಯರು. ಹೆಚ್.ಡಿ.ಕೋಟೆ ತಾ: ಮೈಸೂರು ಜಿಲ್ಲೆ.
ಶ್ರೀಮತಿ ಹೇಮ ಕೋಂ ನಾಗರಾಜು ಯಶವಂತಪುರ ಗ್ರಾಮಪಂಚಾಯಿತಿಯ ಅಧ್ಯಕ್ಷರು. ಹೆಚ್.ಡಿ.ಕೋಟೆ ತಾ: ಮೈಸೂರು ಜಿಲ್ಲೆ.
ಶ್ರೀ ಚಿಕ್ಕಯ್ಯ ಎನ್ ಬೇಗೂರು ಹಾಡಿ. ಗ್ರಾಮಪಂಚಾಯಿತಿಯ ಸದಸ್ಯರು. ಹೆಚ್.ಡಿ.ಕೋಟೆ ತಾ: ಮೈಸೂರು ಜಿಲ್ಲೆ.
ಶ್ರೀ ಬಸವರಾಜು ಬ್ರಹ್ಮಗಿರಿ ಹಾಡಿ, ಎನ್ ಬೇಗೂರು ಗ್ರಾಮಪಂಚಾಯಿತಿಯ ಮಾಜಿ ಸದಸ್ಯರು. ಹೆಚ್.ಡಿ.ಕೋಟೆ ತಾ: ಶ್ರೀಮತಿ ಪಾರ್ವತಿ ಕೋಂ ಜವಣ್ಣ ಆನೆಮಾಳದ ಹಾಡಿ ಗ್ರಾಮಪಂಚಾಯಿತಿಯ ಮಾಜಿ ಸದಸ್ಯರು. ಹೆಚ್.ಡಿ.ಕೋಟೆ ತಾ: ಮೈಸೂರು ಜಿಲ್ಲೆ.

**ಸಮಸ್ಯೆಗಳು:**

ಬಡತನ, ಅನಕ್ಷರತೆ, ಪುನರ್ವಸತೀಕರಣ, ಉದ್ಯೋಗವಕಾಶಗಳ ಕೊರತೆ ಮೊದಲಾದವು.

**ಉಪಸಂಹಾರ:**

ಈ ಮೇಲೆ ತಿಳಿಸಿರುವಂತಹ ಎಲ್ಲಾ ಬುಡಕಟ್ಟು ಸಮುದಾಯಗಳಿಗೆ ಇಂದಿಗೂ ಸರಿಯಾದ ನೆಲೆಗಳಿಲ್ಲ. ಒಂದಲ್ಲಾ ಒಂದು ಸಮಸ್ಯೆ ಎದುರಿಸುವಲ್ಲಿಯೇ ಜೀವನ ಸವೆಸುತ್ತಿದ್ದಾರೆ. ರಾಜಕೀಯವಾಗಿ ಅವರ ಸ್ಥಾನ ಮಾನ ಅತೀ ಕಡಿಮೆ ಎಂಬುದು ಈ ಲೇಖನದ ಮೇಲಿನ ಉದಾಹರಣೆಗಳಿಂದ ತಿಳಿಯುತ್ತದೆ. ಇನ್ನೂ ಹೆಚ್ಚಿನ ಅವಕಾಶ ಒದಗಿಸುವ ಅವಶ್ಯಕತೆಯಿದೆ. ಸಿಕ್ಕ ಸಣ್ಣಪುಟ್ಟ ಅವಕಾಸದಲ್ಲಿ ಇವರ ಅಭಿವೃದ್ದಿ ಸಾಧ್ಯವಾಗಿಲ್ಲ, ಇನ್ನೂ ಹೆಚ್ಚಿನ ರಾಜಕೀಯ ಮೀಸಲಾತಿ, ರಕ್ಷಣೆ ಇತ್ಯಾದಿ ಒದಗಿಸಿದರೆ ಈ ಬುಡಕಟ್ಟುಗಳ ಸ್ಥಾನ ಮಾನ ಹೆಚ್ಚಬಹುದು.

**ಪರಾಮರ್ಶನ ಗ್ರಂಥಗಳು:**

೧. ಆದಿವಾಸಿ ಉಸಿರು, ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್.
೨. ಭಾರತೀಯ ಸಾಮಾಜಿಕ ರಚನೆ ಮತ್ತು ಬದಲಾವಣೆ– ಡಾ: ಎಲ್.ಮಣಿಗಯ್ಯ.
೩. ಸಾಮಾಜಿಕ ಸಮಸ್ಯೆಗಳು: ಡಾ:ಚ.ನಾ.ಶಂಕರರಾವ್.
೪. ಮಧ್ಯಯುಗೀನ ಭಾರತದಲ್ಲಿ ಪರಿಶಿಷ್ಟ ವರ್ಗ– ಜಾತಿಗಳ ವೃದ್ದಿ– ಕೆ.ಎಸ್.ಲಾಲ್.
೫. ಬುಡಕಟ್ಟು ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.



**Radhamani T R**

Research scholar, Department of tribal studies, Kannada University, Hampi, Karnataka